(ಇಂದು ದಿನಾಂಕಃ 13-03-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎ.ಜಿ..ಹೆಚ್. ವಕೀಲರಿಂದಃ**

ಬೆಳಿಗ್ಗೆ 8.00 ರಿಂದ 8.30 ಗಂಟೆಗೆ ಅಪಘಾತವಾಗಿತ್ತು ಎಂದರೆ ಸರಿ. ಅಪಘಾತ ಸಮಯದಲ್ಲಿ ನಾನು ಚಲಾಯಿಸುತ್ತಿದ್ದಂತಹ ದ್ವಿಚಕ್ರ ವಾಹನ ಬೇರೆಯವರ ಮಾಲಿಕತ್ವದಲ್ಲಿತ್ತು. ನನ್ನ ಮಾಲಿಕತ್ವದ

ದ್ವಿಚಕ್ರ ವಾಹನ ರಿಪೇರಿಗೆ ಇತ್ತು. ನನಗೆ ದ್ವಿಚಕ್ರ ವಾಹನ ಮತ್ತು 4 ಚಕ್ರದ ವಾಹನಗಳು ಚಲಾಯಿಸಲು ಪರವಾನಿಗೆ ಇದೆ. ಅಪಘಾತವಾದ ಸಮಯದಲ್ಲಿ ದ್ವಿಚಕ್ರ ವಾಹನ ಚಲಾಯಿಸುವ ಪರವಾನಿಗೆ ಇರಲಿಲ್ಲ ಮತ್ತು ನನ್ನ ತಪ್ಪಿನಿಂದ ಅಪಘಾತವಾಗಿದೆ ಅನ್ನುವುದು ಸರಿಯಲ್ಲ. ಆ ದಿನ ನಾನು ಬೇರೆಯವರ 407 ವಾಹನಕ್ಕೆ ಚಾಲಕನಾಗಿ ಕೆಲಸ ಮಾಡಲು ಹೋಗುತ್ತಿದ್ದೆ. ನಾನು ಹೋಗುವ ಅವಸರದಲ್ಲಿ ದ್ವಿಚಕ್ರ ವಾಹನವನ್ನು ಅತೀವೇಗವಾಗಿ ಚಲಾಯಿಸಿದ್ದರಿಂದ ಅಪಘಾತವಾಗಿದೆ ಅನ್ನುವುದು ಸರಿಯಲ್ಲ. ಕಾರಿನ ಚಾಲಕನ ತಪ್ಪಿನಿಂದ ಈ ಅಪಘಾತವಾಗಿಲ್ಲ ಅನ್ನುವುದು ಸರಿಯಲ್ಲ. ಕಾರಿನ ಚಾಲಕ ಸಾವಕಾಶವಾಗಿ ಕಾರನ್ನು ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ಪ್ರಥಮ ವರ್ತಮಾನ ಹೇಳಿಕೆಯನ್ನು ಶ್ರೀಕಾಂತ ಸೋಮು ಗೌಡ, ಸ್ಥಳೀಯರು ಕೊಟ್ಟಿದ್ದಾರೆ. ಸದರಿ ಶ್ರೀಕಾಂತ ಸೋಮು ಗೌಡ ಇವರು ನನಗೆ ಅನುಕೂಲವಾಗುವಂತೆ ಕಾರಿನ ಚಾಲಕನ ವಿರುದ್ಧ ಸುಳ್ಳು ಪ್ರಥಮ ವರ್ತಮಾನ ಹೇಳಿಕೆ ಕೊಟ್ಟಿದ್ದಾರೆ ಅನ್ನುವುದು ಸರಿಯಲ್ಲ. ನನಗೆ ಅಪಘಾತಪಡಿಸಿದೆ ಎಂದು ಹೇಳಲಾದ ಕಾರ್ ಉತ್ತರಪ್ರದೇಶ ನೋಂದಣಿ ಹೊಂದಿರುವಂತಹ ಕಾರ್ ಆಗಿತ್ತು. ಅಪಘಾತವಾದ ನಂತರ ಪೊಲೀಸರು ನನ್ನ ಸಮಕ್ಷಮದಲ್ಲಿ ಸ್ಥಳ ಮಹಜರನ್ನು ಮಾಡಿಲ್ಲ. ಪೊಲೀಸರು ನನಗೆ ಸಹಾಯ ಮಾಡುವ ಉದ್ದೇಶದಿಂದ ಕಾರಿನ ಚಾಲಕನ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಕಾರಿನ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಕರೆದು ಕಾರಿನ ಚಾಲಕನ ಗುರುತಿನ ಕವಾಯತನ್ನು ನಡೆಸಿಲ್ಲ. ನಾನು ಕ್ರಿಮಿನಲ್ ಕೇಸಿನಲ್ಲಿ ಹೋಗಿ ಸಾಕ್ಷಿಯನ್ನು ಹೇಳಿಲ್ಲ. ಕ್ರಿಮಿನಲ್ ಕೇಸ್ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತವು ನನ್ನ ಅಜಾಗರೂಕತೆಯಿಂದ ಆಗಿದೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಧನ ಕೊಡಲು ಬಾಧ್ಯಸ್ಥರಲ್ಲ ಅನ್ನುವುದು ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್ ಹಾಕಿರಲಿಲ್ಲ ಅನ್ನುವುದು ಸರಿಯಲ್ಲ.

ಪಿ.ಡಬ್ಲ್ಯು.1

ಅಪಘಾತವಾದ ನಂತರ ನಾನು ಪ್ರಾಥಮಿಕ ಆರೋಗ್ಯ ಕೇಂದ್ರ ಕುಮಟಾದಲ್ಲಿ ಚಿಕಿತ್ಸೆ ತೆಗೆದುಕೊಂಡಿದ್ದೇನೆ. ಆನಂತರ ನನ್ನನ್ನು ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿ. ಅಲ್ಲಿ ಶಸ್ತ್ರಚಿಕಿತ್ಸೆ ಮಾಡಿ ದಿನಾಂಕ 26-04-2024 ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನಾನು ಫಾಲೊ ಅಪ್ ಟ್ರೀಟ್‌ಮೆಂಟ್ ತೆಗೆದುಕೊಂಡಿದ್ದೇನೆ ಎಂದು ತೋರಿಸುವ ಯಾವುದೇ ದಾಖಲಾತಿಗಳು ಇಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ತೆಗೆದುಕೊಂಡಿದ್ದರ ಬಗ್ಗೆ ಎಲ್ಲಾ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನಾನು ಕೊನೆಯ ಬಾರಿಗೆ ತೇಜಸ್ವಿನಿ ಆಸ್ಪತ್ರೆಗೆ 7-8 ತಿಂಗಳ ಹಿಂದೆ ಹೋಗಿದ್ದೆ. 7-8 ತಿಂಗಳ ಹಿಂದೆ ನಾನು ಆಸ್ಪತ್ರೆಗೆ ಹೋದಾಗ ಅಂಗನ್ಯೂನತಾ ಪ್ರಮಾಣಪತ್ರ ಪಡೆಯಲು ಪ್ರಯತ್ನ ಪಟ್ಟಿದ್ದೇನೆ. ಅಲ್ಲಿಯ ಆಸ್ಪತ್ರೆಯ ವೈದ್ಯರು ಸರಕಾರಿ ಆಸ್ಪತ್ರೆಯಿಂದ ಅಂಗನ್ಯೂನತಾ ಪ್ರಮಾಣಪತ್ರ ಪಡೆದುಕೊಳ್ಳಬೇಕು ಎಂದು ಹೇಳಿದ್ದಾರೆ. ನನಗೆ ಯಾವುದೇ ಅಂಗನ್ಯೂನತೆ ಇಲ್ಲದ್ದರಿಂದ ಅಂಗ ನ್ಯೂನತಾ ಪ್ರಮಾಣಪತ್ರವನ್ನು ಕೊಡಲು ಸದರಿ ಆಸ್ಪತ್ರೆಯವರು ನಿರಾಕರಿಸಿದ್ದಾರೆ ಅನ್ನುವುದು ಸರಿಯಲ್ಲ. ತೇಜಸ್ವಿನಿ ಆಸ್ಪತ್ರೆಯನ್ನು ಬಿಟ್ಟು ಬೇರೆ ಕಡೆಗೆ ನಾನು ಚಿಕಿತ್ಸೆ ತೆಗೆದುಕೊಂಡಿಲ್ಲ ಎಂದರೆ ಸರಿ. ದಿನಾಂಕ 28-07-2025 ರಂದು ನಾನು ಸಂಪೂರ್ಣವಾಗಿ ಗುಣಮುಖನಾಗಿದ್ದೇನೆ ಎಂದು ಆಸ್ಪತ್ರೆಯವರು ನಿ.ಪಿ.14 ರಲ್ಲಿ ಹೇಳಿದ್ದಾರೆ ಎಂದರೆ ಸರಿಯಲ್ಲ. ನನಗೆ ಪರಿಹಾರ ಧನ ಕೊಡಲಿ ಎಂದು ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಿಗೆ ಮನವಿ ಮಾಡಿಕೊಂಡು ಅಂಗನ್ಯೂನತಾ ಪ್ರಮಾಣಪತ್ರ ಪಡೆದುಕೊಂಡು ಬಂದಿದ್ದೇನೆ ಅನ್ನುವುದು ಸರಿಯಲ್ಲ. ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಇಲ್ಲ, ನಾನು ಮುಂಚಿನ ಹಾಗೆ ಕೆಲಸ ಮಾಡುತ್ತೇನೆ ಅನ್ನುವುದು ಸರಿಯಲ್ಲ. ನನ್ನ ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಹಾಗೆ ನನಗೆ ಯಾವುದೇ ಅಂಗನ್ಯೂನತೆ ಇಲ್ಲಾ ಅನ್ನುವುದು ಸರಿಯಲ್ಲ. ಹೆಚ್ಚಿನ ಪರಿಹಾರ ಧನ ಬರಲಿ ಎಂದು ನಿ.ಪಿ.15 ನ್ನು ಸುಳ್ಳು ಸೃಷ್ಟಿ

ಮಾಡಿಕೊಂಡು ಬಂದು ಹಾಜರುಪಡಿಸಿದ್ದೇನೆ ಅನ್ನುವುದು ಸರಿಯಲ್ಲ. ನನ್ನ ಚಾಲನಾ ಪರವಾನಿಗೆಯಲ್ಲಿ ನನ್ನ ಜನ್ಮದಿನಾಂಕವನ್ನು ನಿ.ಪಿ.16 ರಲ್ಲಿ ನಮೂದಿಸಿದ್ದು ಸರಿ ಇದೆ ಎಂದರೆ ಸರಿ. ನಿ.ಪಿ.17 ನ್ನು ವೈದ್ಯರೊಂದಿಗೆ ಶಾಮೀಲಾಗಿ ಹೆಚ್ಚಿನ ಪರಿಹಾರ ಧನ ಬರಲಿ ಎಂದು ಸುಳ್ಳು ಸೃಷ್ಟಿ ಮಾಡಿಕೊಂಡಿದ್ದೇನೆ ಅನ್ನುವುದು ಸರಿಯಲ್ಲ. ನನಗೆ ಅಪಘಾತದ ನಂತರ ಚಾಲನೆ ಮಾಡಲು ಆಗುತ್ತಿಲ್ಲ ಎಂದು ನನ್ನ ಚಾಲನಾ ಪರವಾನಿಗೆಯನ್ನು ರದ್ದುಪಡಿಸಿಕೊಂಡಿಲ್ಲ ಎಂದರೆ ಸರಿ. ನಿ.ಪಿ.16 ರ ಪ್ರಕಾರ ದಿನಾಂಕ 03-02-2026 ರಂದು ನಾನು ನನ್ನ ಚಾಲನಾ ಪರವಾನಿಗೆಯನ್ನು ನವೀಕರಿಸಿಕೊಂಡಿದ್ದೇನೆ ಅನ್ನುವುದು ಸರಿಯಲ್ಲ.

ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಸೇರಿದ ಎ.ಪಿ.ಎಲ್ ಪಡಿತರ ಚೀಟಿ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಅದನ್ನು ತಿದ್ದುಪಡಿ ಮಾಡಲು ತಹಶೀಲ್ದಾರ ಕಚೇರಿಯಲ್ಲಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಅದರ ಕುರಿತು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ನನಗೆ ಕೂಲಿ ಕೆಲಸ ಮತ್ತು ಬದಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದುದರಿಂದ ತಿಂಗಳಿಗೆ ರೂ. 18,000-00 ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೆಲಸ ಮತ್ತು ಆದಾಯ ಕುರಿತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸೇರಿದ ಮೆಡಿಕಲ್ ವಿಮೆ ಇಲ್ಲ ಮತ್ತು ಸರಕಾರದ ಫಲಾನುಭವಿ ಯೋಜನೆಯಡಿಯಲ್ಲಿ ಆಸ್ಪತ್ರೆಯ ಖರ್ಚಿಗೆ ಸಂಬಂಧಿಸಿದಂತೆ ಮರುಪಾವತಿ ಮಾಡಿಕೊಂಡಿಲ್ಲ. ನಿ.ಪಿ.11 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆ ಅನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ 3 ಬಾರಿ ತೇಜಸ್ವಿನಿ ಆಸ್ಪತ್ರೆಗೆ ಹೋಗಿದ್ದು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಅದು ಸರಿಯಲ್ಲ, ನಾನು ಬಹಳ ಸಾರಿ ಸದರಿ ಆಸ್ಪತ್ರೆಗೆ ಹೋಗಿದ್ದೇನೆ ಎಂದು ಹೇಳುತ್ತಾರೆ. ನನಗೆ ಇಂಗ್ಲಿಷ್ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ನಾನು ಓದಿಲ್ಲ, ನನಗೆ

ಓದಿ ಹೇಳಿದ್ದಾರೆ. ನನಗೆ ಓದಿ ಹೇಳಿದ ಪ್ರಕಾರ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸರಿಯಾಗಿವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಸತ್ಯವಾದ ವಿಷಯಗಳನ್ನು ಬರೆದಿಲ್ಲ ಅನ್ನುವುದು ಸರಿಯಲ್ಲ. ನನ್ನ ಹೆಸರಿನಲ್ಲಿ ಯೂನಿಯನ್ ಬ್ಯಾಂಕ್ ಮತ್ತು ಕೆ.ವಿ.ಜಿ. ಬ್ಯಾಂಕಿನಲ್ಲಿ ಬ್ಯಾಂಕ್ ಖಾತೆಗಳು ಇವೆ. ನನಗೆ ಹೆಚ್ಚಿನ ಪರಿಹಾರ ಧನ ಬರಲಿ ಎಂದು ನನಗೆ ದಿನನಿತ್ಯದ ಕೆಲಸಗಳು ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

ಕಾರ್ ಚಾಲಕನಿಗೆ ಸೂಕ್ತ ಚಾಲನಾ ಪರವಾನಗಿ ಇರಲಿಲ್ಲ ಮತ್ತು ಸದರಿ ಕಾರಿಗೆ ಸಂಬಂಧಪಟ್ಟ ದಾಖಲಾತಿಗಳು ಸರಿಯಾಗಿ ಇರಲಿಲ್ಲ ಅನ್ನುವುದು ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಧನ ಕೊಡಲು ಬಾಧ್ಯಸ್ಥರಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ 1 ನೇ ಎಂ.ಎ.ಸಿ.ಟಿ. ಕಾರವಾರ